ನಾವು ನಿಯೋಗ ತೆಗೆದುಕೊಂಡು ಹೋಗುವುದಕ್ಕೂ ಸಿದ್ದರಾಗಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೇ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ಹೆಕ್ಟೇರ್ ನೀರಾವರಿ ಮಾಡಬೇಕಾಗಿತ್ತು, ಎಷ್ಟು ದುಡ್ಡು ಅಲಾಟ್ ಮಾಡಿತ್ತು, ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ನೀರಾವರಿ ಆಗಿದೆ ಎಂದು ಹೇಳಿದ್ದೇನೆ. ಅದರ ಬಗ್ಗೆ ಸಮಗ್ರವಾಗಿ ಒಂದು ತನಿಖೆ ಮಾಡಿಸಿ ಸ್ವಾಮಿ.

ಶ್ರೀ ಧರ್ಮಸಿಂಗ್ : ಅಧ್ಯಕ್ಷರೇ, ಅವರು ಏನೇನು ವಿಚಾರಗಳನ್ನು ಹೇಳಿದ್ದಾರೆ, ಸಮಗ್ರವಾದ ತನಿಖೆ ಮಾಡಿ, ಇದೇ ಸದನದಲ್ಲಿ ಒಂದು ಹೇಳಿಕೆ ಕೂಡ ಮಾಡುತ್ತೇನೆ.

9. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ (ಮುಂದು)

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ನಾನು ನೀರಾವರಿ ಬಗ್ಗೆ ಮಾತನಾಡುತ್ತಾ ಇದ್ದೆ. ನೀರಾವರಿ ಬಗ್ಗೆ ಏನು ಸನ್ಮಾನ್ಯ ಅರ್ಥ ಸಚಿವರು ಹೇಳಿದ್ದಾರೆ, ಈ ಸಲ ಬಜೆಟ್‌ನಲ್ಲಿ ಅಂತಹ ವಿಶೇಷವಾದುದೇನೂ ಇಲ್ಲ. ಏಕೆಂದರೆ, ಪ್ರತಿ ಸಲ ಕೊಟ್ಟ ಹಾಗೆ ಅಲೋಕೇಷನ್ ಕೊಟ್ಟುಕೊಂಡು ಹೋಗಿದ್ದಾರೆ. ದುರ್ದೈವ ಎಂದರೆ, ಈ ನೀರಾವರಿಯನ್ನು ಎರಡು ವಲಯ ಮಾಡಿದ್ದಾರೆ. ಕೃಷ್ಣಾ ಭಾಗ್ಯ ಜಲನಿಗಮ ಎಂದು ಒಂದು ವಲಯಕ್ಕೆ ಹೆಸರಿಟ್ಟಿದ್ದಾರೆ, ಕಾವೇರಿ ಎಂದು ಇನ್ನೊಂದಕ್ಕೆ ಇಟ್ಟಿದ್ದಾರೆ. ನಾನು ಈ ಸಭೆಯಲ್ಲಿ ನಿಂತುಕೊಂಡು ಕೇಳುತ್ತೇನೆ. ಅಂದಿನ ಮುಖ್ಯಮಂತ್ರಿಗಳು ಸುಮಾರು ಐದು ಸಾವಿರ ಕೋಟಿ ರೂಪಾಯಿಗಳನ್ನು ನಾನು...

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸಿ.ಇ.ಟಿ. ಬಗ್ಗೆ ಒಂದು ಹೇಳಿಕೆ ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಗಲಿ ಸಾರ್.

10. ಮುಖ್ಯಮಂತ್ರಿಗಳ ಹೇಳಿಕೆ

ಸಿ.ಇ.ಟಿ. ಬಗ್ಗೆ ನಿರ್ಣಯ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಈ ಸಿ.ಇ.ಟಿ. ಯಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಈಗಾಗಲೇ ನಾವು ಎರಡು ಸುತ್ತಿನ ಮಾತುಕತೆ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿದ್ದೇವೆ ಮತ್ತೆ ಮ್ಯಾನೇಜ್‌ಮೆಂಟ್ ಜೊತೆಯಲ್ಲೂ ಕೂಡ ಮಾತನಾಡಿದ್ದೇವೆ. ಕೊನೆಗೆ, ವಿರೋಧ ಪಕ್ಷದ ನಾಯಕರ ಸಮೇತ ಎಲ್ಲಾ ಮ್ಯಾನೇಜ್‌ಮೆಂಟಿನವರ ಜೊತೆ ಮತ್ತೆ ಅಧಿಕಾರಿಗಳ ಜೊತೆಯಲ್ಲಿ ಸಮಗ್ರವಾದಂಥ ಚರ್ಚೆ ಮೂರು ದಿವಸಗಳ ಹಿಂದೆ ಆಗಿದೆ. ಸುಪ್ರೀಂ ಕೋರ್ಟಿನ ಆದೇಶ ಇದೆ. ಆದರೂ ಕೂಡ ಸರ್ಕಾರದ ನಿರ್ಧಾರ 75:25 ಏನು ಇದೆ, ಅದರ ಬಗ್ಗೆ ಈ ಸದನದಲ್ಲಿ ನಾನು ಒಂದು ನಿರ್ಣಯವನ್ನು ಮಂಡಿಸುತ್ತಿದ್ದೇನೆ. ಈ ನಿರ್ಣಯದ ಮೇಲೆ ಚರ್ಚೆ ಕೂಡ ಆಗಬೇಕಾಗಿದೆ. ಇವತ್ತು ಕರ್ನಾಟಕದ ವಿಧಾನಸಭೆ 5 ಕೋಟಿ 45 ಲಕ್ಷ ಜನರಿಗೆ ಒಂದು ಸಂದೇಶ ಕೊಡಬೇಕಾಗಿದೆ. ಈ ಸರ್ಕಾರ ಬಡವರ ಬಗ್ಗೆ ಇದೆ, ಬಡವರ ಬಗ್ಗೆ ಚಿಂತನೆ ಮಾಡುತ್ತಾ ಇದೆ ಎನ್ನತಕ್ಕಂಥ ಅಭಿಪ್ರಾಯ ಮೂಡಿಸತಕ್ಕ ರೀತಿಯಲ್ಲಿ ಈ ಸದನದಲ್ಲಿ ನಿರ್ಣಯವನ್ನು ಮಂಡಿಸುತ್ತಾ ಇದ್ದೇನೆ. ಇದರ ಬಗ್ಗೆ ಚರ್ಚೆಯಾಗಲೇ, ಇವತ್ತೇ ಎಂದಲ್ಲ, ನಾಳೆ ಚರ್ಚೆಯಾಗಲಿ. ಏಕೆಂದರೆ 31ನೇ ತಾರೀಖಿನೊಳಗೆ ಇದರ ಇತ್ಯರ್ಥ